REPRESENTATIONS

SRI AZEEZ SAIT.-- Sir, my submission is that for the first time in the State of Karnataka Jatha is coming to Bangalore: Will the Government make some arrangements to supply food packets to receive them and arrange for drinking water facilities and also to see that if the Jatha comes here and represent their grievances to the Government, on their return special buses are arranged, I want categorical answer from the Deputy Leader of the House.

ಅಧ್ಯಕ್ಷರು.—ಈ ಆನುಕೂಲತೆಗಳನ್ನು ತಾವು ಮಂತ್ರಿಗಳಾಗಿದ್ದಾಗಲೂ ಮಾಡಿಲ್ಲ. ಯಾವ ಸರ್ಕಾರವೂ ಮಾಡಿಲ್ಲ.

ಶ್ರೀ ಅಜೀಜ್ ಸೇಠ್ — '' ಯಥಾ ರಾಜಾ ತಥಾ ಪ್ರಜಾ'' ಎನ್ನುವುದು ಹೋಗಿ '' ಯಥಾ ಪ್ರಜಾ ತಥಾ ರಾಜಾ'' ಎಂದಾಗಿದೆ. ಆದುದರಿಂದ, ನಾವೀಗ ಅವರ ಸೇವೆ ಮಾಡದಿದ್ದರೆ ಇನ್ನಾರು ಮಾಡುತ್ತಾರೆ?

ಶ್ರೀ ಜೆ.ಹೆಚ್. ಪಟೇಲ್.—ಯಾವ ಸರ್ಕಾರವು ಇಂತಹ ಆನುಕೂಲತೆಗಳನ್ನು ಮಾಡಿಲ್ಲವೆಂದು ಮಾನ್ಯ ಅಧ್ಯಕ್ಷರು ಹೇಳುತ್ತಿದ್ದಾರೆ. ನಿನ್ನೆ ಪತ್ರಿಕೆಯಲ್ಲಿ ಓದಿದೆ; ದೆಹಲಿಯಲ್ಲಿ ನಡೆಯುವರೈತ ಸಮ್ಮೇಳನಕ್ಕೆ ಸುಮಾರು ೧೧೦ ವಿಶೇಷ ರೈಲುಗಳನ್ನೂ ಮತ್ತು ೨೫ ಸಾವಿರ ಬಸ್ಸುಗಳ ಮೂಲಕ ರೈತರನ್ನು ಕರೆತರುವುದಕ್ಕಾಗಿ ಪ್ರಧಾನ ಮಂತ್ರಿಗಳು.....

SRI AZEEZ SAIT.—That is all hired people. When the farmers are coming to our own State headquarters, it is the bounden duty of the Government to see that drinking water facilities, food packets are provided. On their return, they will pay for it.

ಶ್ರೀ ಜೆ.ಹೆಚ್. ಪಟೇಲ್.— ಅಲ್ಲಿಗೆ ರೈತರು ಹೋಗುವುದಕ್ಕೆ ನಮ್ಮದೇನೂ ಆಭ್ಯಂತರವಿಲ್ಲ. ರೈತರು ಹೋಗಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲಿ. ಪ್ರಧಾನ ಮಂತ್ರಿಯವರೆಗೂ ಹೋಗಲಿ. ಬೇಡ ಎನ್ನುವುದಿಲ್ಲ. ಆದರೆ, ಅಲ್ಲಿಗೆ ಹೋಗಲು ಯಾವ ರೀತಿ ವ್ಯವಸ್ಥೆ ಮಾಡುತ್ತೀರೋ ಆದೇ ವ್ಯವಸ್ಥೆಯನ್ನು ನಾಳಿದ್ದು ಜಾಥಾ ಬರುವ ರೈತರಿಗೂ ಮಾಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಅಜೀಜ್ ಸೇಟ್.— ಕುಡಿಯುವ ನೀರಿನ ವ್ಯವಸ್ಥೆ, ಫುಡ್ ಪಾಕೇಟುಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ದೆಲ್ಲಿಯಲ್ಲಿ ಆಗುತ್ತಿರುವುದು ಜನರನ್ನು ಇವರು ಕೊಂಡುಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು. ತಾವು ಪ್ರಶ್ನೆಕೇಳಿ ಅವರುಗಳಿಗೆ ತೊಂದರೆಯಾಗುವ ರೀತಿಯಲ್ಲಿ ಮಾತನಾಡುತ್ತೀದ್ದೀರಿ. ಅವರು ಎಲ್ಲರ ಪ್ರೀತಿಗೆ ಪಾತ್ರವಾಗುವಂತ ಕೆಲಸ ಮಾಡುತ್ತಿದ್ದಾರೆ.

ಶ್ರೀ ಅಜೀಜ್ ಸೇಟ್.— ನಾನು ಹಿಂದೆ ಮಹಾರಾಜರ ಕಾಲದಿಂದಲೂ ನೋಡಿ ಕೊಂಡು ಬಂದಿದ್ದೇನೆ. ಅವರ ಕಾಲದಲ್ಲಿ ಜನತೆಗೆ ಊಟದ ವ್ಯವಸ್ಥೆ ಮತ್ತು ನೀರಿನ ವ್ಯವಸ್ಥೆ ಮಾಡುತ್ತಿದ್ದರು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರ್ಕಾರ ಮಾಡದೇ ಯಾರು ಮಾಡುತ್ತಾರೆ?

ಶ್ರೀ ಪಿ. ರಾಂದೇವ್.— ಸ್ವಾಮಿ, ನಾನು ಬೆಂಗಳೂರು ನಾಗರೀಕನಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ ವಿಶೇಷವಾದ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆ. ಸ್ಯಾನಿಟೇಷನ್, ಸಾರಿಗೆ ವ್ಯವಸ್ಥೆ, ಹಾಲಿನ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಮೇಲೆ ಕೆಲವು ಪರಿಣಾಮಗಳು ಬೀರುತ್ತೆ ಬಾಂಬೆನಲ್ಲಿ ಬಿ.ಜೆ.ಪಿ. ಸಮ್ಮೇಳನ ನಡೆದಾಗ ಅಲ್ಲಿ ೬೦ ಸಹಸ್ರ ಜನಕ್ಕೆ ಕುಡಿಯುವ ನೀರಿನ ವ್ಯವಸ್ಥೆ, ಸ್ಯಾನಿಟೇಷನ್ ವ್ಯವಸ್ಥೆ ಮಾಡಲಾಗಿತ್ತು. ಆದೇರೀತಿ ಇಲ್ಲಿಯೂ ಕೂಡ ರಾಜಕೀಯ ದೃಷ್ಟಿಯಿಂದ ನೋಡದೆ, ಮಾನವೀಯ ದೃಷ್ಟಿಯಿಂದ ಕುಡಿಯುವ ನೀರಿನ ವ್ಯವಸ್ಥೆ, ಸ್ಯಾನಿಟೇಷನ್ ವ್ಯವಸ್ಥೆ — ಮತ್ತು ಸಾರಿಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವುದು.